ಉದ್ಯೋಗಕ್ಕೆ. 'ಹೋಗ್ಲಿ ಬಿಡು. ಹೊರಗಿನ ಪ್ರಪಂಚ ನೋಡ್ಲಿ. ಯಾರಿಗೆ ಗೊತ್ತು, ಅವನ ಅದೃಷ್ಟ ಚೆನ್ನಾಗೇ ಇರಬಹುದು...' ಎನ್ನುವಂತಾ ಪ್ರೋತ್ಸಾಹದ ಮಾತಾಡಿದ ಅಪ್ಪ ಈಗಿಲ್ಲ. ಅಮ್ಮ ನಿತ್ರಾಣಿಯಾಗಿದ್ದರೂ ಮನೆಯೊಳಗೆ ಓಡಾಡಿಕೊಂಡಿದ್ದಾಳೆ. ಅಮ್ಮನ ನೆನವರಿಕೆಯೊಂದಿಗೆ ಮನದಲ್ಲೊಂದು ಸಮಾಧಾನದ ಸೆಳಕು. ಅಪರೂಪಕ್ಕೊಮ್ಮೆ ದಿನಬಳಕೆಯ ಸೀರೆ ತೆಗೆದುಕೊಂಡು ಹೋಗಿ ಕೊಟ್ಟರೆ ಮಗ ಪಟ್ಟೆಪೀತಾಂಬರ ಉಡಿಸುತ್ತಿದ್ದಾನೆ ಎನ್ನುವಷ್ಟು ಸಂಭ್ರಮ. ಅವಳು ಗಳಿಗೆ ಮುರಿದು ಹೊಸ ಸೀರೆ ಉಟ್ಟು ಓಡಾಡುವುದನ್ನು ನೋಡುವುದೇ ಮಗನಾದವನಿಗೆ ಒಂದು ಸುಖ. ಇನ್ನೇನು ಊರು ಹತ್ತಿರ ಹತ್ತಿರವಾಗುತ್ತಿದೆ. ಮೊಮ್ಮಗನನ್ನು ನೋಡುವ ಸಡಗರದಲ್ಲಿ ಅಮ್ಮ ಬಾಗಿಲಲ್ಲಿ ಕಾದು ನಿಂತಿರಬಹುದೆನ್ನುವ ನೆನವರಿಕೆ.

ಮುಖ್ಯ ರಸ್ತೆಯಿಂದ ವಾಹನ ಅಡ್ಡರಸ್ತೆಗೆ ತಿರುಗಿಕೊಂಡಿತು, ರಾಜೀವನ ನಿರ್ದೇಶನದಂತೆ. ಇನ್ನು ಒಂದೂವರೆ ಮೈಲು. ಹೊಂಡಗುಂಡಿಗಳ ಕಚ್ಚಾ ರಸ್ತೆ. ಬಸ್ಸಿಳಿದು ಊರಿಗೆ ನಡೆದುಕೊಂಡು ಹೋಗುತ್ತಿದ್ದ ದಿನಗಳು ಕಣ್ಣು ಮುಂದೆ ಹಾದು ಹೋಗುತ್ತಿದ್ದಂತೆ ಉತ್ಸುಕನಾಗಿ ಸೀಟಿನಲ್ಲಿ ಮುಂದೆ ಜರುಗಿ ಕೂತ ರಾಜೀವ. ವ್ಯಾನು ಫರ್ಲಾಂಗ್ ದೂರವೂ ಕ್ರಮಿಸಿರಲಿಲ್ಲ, ಒಂದಷ್ಟು ಜನ ರಸ್ತೆಯ ಬದಿಯಲ್ಲಿ ಜಮಾಯಿಸಿದ್ದಾರೆ. ಹತ್ತಿರ ಹೋಗುತ್ತಿದ್ದಂತೆ ಎಲ್ಲವೂ ಸ್ಪಷ್ಟವಾಯ್ತು. ದಾರಿಗೆ ಅಡ್ಡವಾಗಿ ದೊಡ್ಡ ದೊಡ್ಡ ಕಾಡುಗಲ್ಲುಗಳನ್ನು, ಮುಳ್ಳುಕಂಟಿಗಳನ್ನು ಪೇರಿಸಿಟ್ಟು ಕೈಲಿ ಉದ್ದನೆಯ ಬಡಿಗೆ ಹಿಡಿದು ಗುಂಪುಗೂಡಿದವರು ತಮ್ಮ ಹಳ್ಳಿಯವರೇ. ತೀರಾ ಗೊತ್ತಿರುವವರೇ. ಡ್ರೈವರ್ ವಾಹನ ನಿಲ್ಲಿಸಿ ರಾಜೀವನ ಮುಖ ನೋಡಿದ. ರಾಜೀವ ವ್ಯಾನಿನ ಬಾಗಿಲು ತೆಗೆದು ಕೆಳಗಿಳಿದ.

"ಏನ್ರಪ್ಪಾ ಇದೆಲ್ಲಾ? ಯಾಕೆ ಅಡ್ಡ ಹಾಕ್ತಿದೀರಿ?" ವಿಷಯ ಗೊತ್ತಿಲ್ಲದಷ್ಟು ಅವನು ಅಜ್ಞನಲ್ಲ. ಪರವೂರಿನಲ್ಲಿದ್ದವರು ತಮ್ಮೂರಿಗೆ ಬರದಂತೆ ಅವರನ್ನು ದಾರಿಯಲ್ಲೇ ತಡೆದು ವಾಪಸು ಕಳಿಸುವ ಕುರಿತು ಅವನು ದೂರದರ್ಶನದಲ್ಲಿ ನೋಡಿದ್ದ. ಆದರೆ, ಅದೆಲ್ಲಾ ಗುರುತು ಪರಿಚಯವಿಲ್ಲದ ಹೊಸಬರಿಗೆ ಎಂದು ಅವನ ತಿಳಿವಳಿಕೆ. ಈಗ ನೋಡಿದರೆ ಊರಿನ ಮಗನನ್ನೇ ತಡೆಯುತ್ತಿದ್ದಾರೆ ಗೊತ್ತಿರುವ ಈ ಜನ.

